**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್.**

ದಿನಾಂಕಃ 28 ನೇ ಸೆಪ್ಟೆಂಬರ್ ತಿಂಗಳು 2021 ರಂದು

ಸಿಸಿ ನಂ.1031/2021
(ಸಿಸಿ ನಂ.372/2018)

ಫಿರ್ಯಾದುದಾರರುಃ ಸರಕಾರ (ಆಡೂರ ಪೋಲೀಸರಿಂದ)

ವಿರುದ್ಧ

ಆರೋಪಿತರುಃ
1. ಶ್ರೀಮತಿ ರಶ್ಮಿ ಕೋಂ ಗೌರಿಶಂಕರ ಮಾಗವಿ, 66 ವರ್ಷ, ಉಃ ಹೆಚ್.ಪಿ ಗ್ಯಾಸ್ ಮಾಲೀಕರು, ವಾಸಃ ರೈಲ್ವೆ ಸ್ಟೇಷನ್ ರೋಡ್, ಹಾವೇರಿ ಜಿಲ್ಲೆ.
2. ಪರಶುರಾಮ ತಂದೆ ಮಲ್ಲಪ್ಪ ಜಾನಗುಂಡಿ, 28 ವರ್ಷ, ಉಃ ಚಾಲಕ, ವಾಸಃ ಕಾಮನಹಳ್ಳಿ, ಹಾನಗಲ್ ತಾಲ್ಲೂಕು,

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 251 ರ ಅಡಿಯಲ್ಲಿ ಆರೋಪಣಾ ಸಾರಾಂಶ**

ದಿನಾಂಕಃ 06.05.2018 ರಂದು ಸಂಜೆ 4.00 ಗಂಟೆ ಸುಮಾರಿಗೆ ಆಡೂರ ಪೋಲೀಸ್ ಠಾಣಾ ವ್ಯಾಪ್ತಿಯ ಎಕ್ಕಂಬಿ ಮೊಳಕಾಲ್ಮೂರ ರಾಜ್ಯ ಹೆದ್ದಾರಿ 2 ರ ಕಿಲೋ ಮೀಟರ್ 32.2 ರ ಹತ್ತಿರ ಮನೋಹರ ನಗರ ಸಮೀಪ ಆರೋಪಿತರಾದ ನೀವು ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಸಹ ಸರ್ಕಾರದ ಉಜ್ವಲ ಯೋಜನೆಯಲ್ಲಿ ಬಂದಂತಹ 15 ಗ್ಯಾಸ್ ಒಲೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಿ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘನೆ ಮಾಡಿರುತ್ತೀರಿ ಎಂದು ತನಿಖೆಯಿಂದ ಧೃಢಪಟ್ಟಿದ್ದು ನೀವು ಭಾರತೀಯ ದಂಡ ಸಂಹಿತೆಯ ಕಲಂ 188 ಹಾಗೂ ಪ್ರಜಾಪ್ರತಿನಿಧಿ ಕಾಯ್ದೆಯ ಕಲಂ 123 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂಧರ್ಭಗಳಂದು ಆರೋಪಿಗಳಾದ ನೀವು ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿ ಚಾಸಾ. 10 ಶ್ರೀಮತಿ ಚಂದ್ರವ್ವ, ಚಾಸಾ. 11 ಶ್ರೀಮತಿ ಜಮಾಲಾಬಿ ಚಾಸಾ.12 ಶ್ರೀಮತಿ ಹನುಮವ್ವ ಚಾಸಾ.13 ಶ್ರೀಮತಿ ಸರಪುನ್ನೀಸಾ, ಚಾಸಾ.14 ಶ್ರೀಮತಿ ಜಯಮ್ಮ, ಚಾಸಾ.15 ಶ್ರೀಮತಿ ಲಲಿತ, ಚಾಸಾ.16 ಶ್ರೀಮತಿ ಬಡೀಬಿ, ಚಾಸಾ.17 ಶ್ರೀಮತಿ ದಿಲ್ ಶಾದ ಬೇಗಂ, ಚಾಸಾ.18 ಶ್ರೀಮತಿ ಸಿದ್ದಮ್ಮ, ಚಾಸಾ.19 ಶ್ರೀಮತಿ ಖಾದಾರಾಬಿ, ಚಾಸಾ.20 ಶ್ರೀಮತಿ ಗಂಗಮ್ಮ, ಚಾಸಾ.21 ಶ್ರೀಮತಿ ಶಿವಗಂಗವ್ವ, ಚಾಸಾ.22 ಶ್ರೀಮತಿ ಮಮತಾಜ, ಹಾಗೂ ಚಾಸಾ.23 ಶ್ರೀಮತಿ ಸುವರ್ಣ ರವರಿಗೆ ಗ್ಯಾಸ್

ಸಿಲಿಂಡರ್ ಗಳನ್ನು ಹಂಚಿ ಲಂಚಗುಳಿತನ ಮಾಡಿರುತ್ತೀರಿ ಎಂದು ತನಿಖೆಯಿಂದ ಧೃಢಪಟ್ಟಿದ್ದು ನೀವ್ರು ಭಾರತೀಯ ದಂಡ ಸಂಹಿತೆಯ ಕಲಂ 171E ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

| | |
|---|---|
| ಪ್ರಶ್ನೆ:1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | |
| ಪ್ರಶ್ನೆ: 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | |

ಮೇಲಾಣಿಸಿದ ಆಪಾದನೆಯನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಹಾನಗಲ್.